## ಪರಿಶಿಷ್ಟ ೨

ನಮ್ಮ ದೇಶದಲ್ಲಿ ಪ್ರಧಾನವಾಗಿ, ಉತ್ತರ ಭಾರತದಲ್ಲಿ ವಿಕ್ರಮ ಶಕೆಯೂ, ದಕ್ಷಿಣದಲ್ಲಿ, ಅದರಲ್ಲಿಯೂ, ಕರ್ನಾಟಕದಲ್ಲಿ, ವಿಶೇಷತಃ ಶಾಲಿವಾಹನ ಶಕೆಯೂ ಪ್ರಚಲಿತವಿವೆ. ವಿಕ್ರಮ ಶಕೆಯು ಕ್ರಿ.ಪೂ.೫೮ ರಲ್ಲಿಯೂ ಶಾಲೀವಾಹನ ಶಕೆಯು ಕ್ರಿ.ಶ. ೭೮ ರಲ್ಲಿಯೂ ಪ್ರವರ್ತಿತವಾದುವೆಂದು ಸದ್ಯ ಪ್ರಚಲಿತವಿರುವ ಪಂಚಾಂಗಗಳಿಂದ ನಿರ್ದೇಶಿತವಾಗುವುದು. ಇಷ್ಟಲ್ಲದೆ ಮಹಾವೀರ ನಿರ್ವಾಣ ಕಾಲ ಮತ್ತು ವಿಕ್ರಮಶಕೆಗಳ ಅಂತರ ಕಾಲವನ್ನು ಮತ್ತು ಮ.ವೀ.ನಿ. ಕಾಲ ಮತ್ತು ಶಾಲಿವಾಹನಶಕ ಕಾಲಗಳ ಅಂತರವನ್ನು ಹೇಳುವ ಪ್ರಾಚೀನ ದಾಖಲಾತಿಗಳಿವೆ. ತಿಲೋಯ ಪಣ್ಣತ್ತಿಯಲ್ಲಿ ಹೇಳಿರುವ ಇಂತಹ ಶಕ ಕಾಲಗಳಲ್ಲಿ ಒಂದು ಮ.ವೀ.ನಿ. ಕಾಲದಿಂದ ೬೦೫ ವರ್ಷ ಮತ್ತು ೫ ತಿಂಗಳ ಕಾಲಕ್ಕೆ ಶಕಕಾಲ ಪ್ರಾರಂಭವಾಯಿತೆಂದು ತಿಳಿಸುವುದು.

ಣಿವ್ವಾಣೇ ವೀರಜಿಣೇ ಚವ್ವಾಸಸದೇಸು ಪಂಚ ವರಿಸೇಸು।

ಪಣ ಮಾಸೇಸು ಗದೇಸು ಸಂಜಾದೋ ಸಗಣಿಓ ಅಹವಾ॥ ೧೪೯೯/೪

ಇದು ದಿಗಂಬರ ಜೈನ ಆಮ್ನಾಯದಲ್ಲಿ ವಿಶೇಷವಾಗಿ ಪ್ರಚಾರದಲ್ಲಿರುವ ಕಾಲ ಗಣನೆಯಾಗಿದೆ. ಪ್ರಾಯಿಕವಾಗಿ ಶ್ವೇತಾಂಬರ ಜೈನ ಆಮ್ನಾಯದಲ್ಲಿ ಮ. ವೀ. ನಿ. ೪೭೦ನೇ ವರ್ಷಪೂರ್ತಿ ಸಮಯದಲ್ಲಿ ವಿಕ್ರಮ ಶಕೆ ಪ್ರಾರಂಭವಾಯಿತೆಂಬ ಐತಿಹ್ಯ ಉಳಿದು ಬಂದಿದೆ.

ಸುನ್ನ ಮುಣಿ ವೇಯಜುತ್ತಾ ಜಿಣಕಾಲಾ ವಿಕ್ಕಮೋ । (ತಪಾಗಚ್ಛ ಪಟ್ಟಾವಲಿ)

ನಂದಿ ಆಮ್ನಾಯ ಪಟ್ಟಾವಲಿಯಲ್ಲಿಯೂ 'ವಿಕ್ರಮ ಪ್ರಬಂಧ' ವೆಂಬ ಗ್ರಂಥ ದಾಧಾರದಿಂದ ಇದೇ ಕಾಲವನ್ನು ನಿರ್ದೇಶಿಸಿದೆ.

ಸುತ್ತರಿ ಚದು ಸದಜುತ್ತೋ ತಿಣ (ಜಿಣ) ಕಾಲಾ ವಿಕ್ಕಮೋ ಹವಇ ಜಮ್ಮೋ।

(ಪೂ. ಸೂ. ಸರಸ್ವತೀ ಗಚ್ಛ ಪಟ್ಟಾವಲಿ)

ಇದರಂತೆ ಮ. ವೀ. ನಿ. ಕಾಲದಿಂದ ೪೭೦ ವರ್ಷಗಳು ತುಂಬಿದಾಗ ವಿಕ್ರಮನ ಜನ್ಮವಾಯಿತು. ಇದೇ ಆಧಾರದಿಂದ ವಿಕ್ರಮ ಶಕೆಯ ಆರಂಭವಾಗಿದೆ. ವಿಕ್ರಮ ಶಕೆಯ ಆರಂಭದಿಂದ

೧೩೫ ವರ್ಷ ೫ ತಿಂಗಳು ತುಂಬಿದ ಸಮಯಕ್ಕೆ ಸರಿಯಾಗಿ ಶಾಲಿವಾಹನ ಶಕೆಯು ಆರಂಭವಾಗಿದೆ. ಈ ಕಾಲಗಣನೆಯಾಧಾರದಿಂದ ಭಗವಾನ್ ಮಹಾವೀರನು ಕ್ರಿ.ಪೂ. ೫೨೭ ವರ್ಷ ಮತ್ತು ೨ ತಿಂಗಳುಗಳ ಸಮಯದಲ್ಲಿ ಎಂದರೆ ಕ್ರಿ.ಪೂ. ೫೨೮ನೇ ಇಸವಿ ಅಕ್ಟೋಬರ್ ಮಾಹೆ ಅಂತ್ಯ, ಅಥವಾ ನವೆಂಬರ್ ಮಾಹೆ ಪ್ರಾರಂಭದ ಸಮಯದಲ್ಲಿ ನಿರ್ವಾಣ ಹೊಂದಿದ್ದಾನೆಂದು ಖಚಿತವಾಗುವುದು. ಆದರೆ ಮಾನ್ಯ ಫ್ಲೀಟ್ ರವರೇ ಮೊದಲಾದ ಐರೋಪ್ಯ ಸಂಶೋಧಕ ಪ್ರಮುಖರು ಕ್ರಿ.ಪೂ. ೪೮೭–೮೮ ರಲ್ಲಿ ಮಹಾವೀರನ ನಿರ್ವಾಣವಾಗಿರಬೇಕೆಂದು ನಿರ್ಣಯಿಸಿದ್ದಾರೆ. ಇವರ ಈ ನಿರ್ಣಯವು ಪ್ರಾಧಾನ್ಯತಃ ಸಿಲೋನಿನ್ ಐತಿಹಾಸಿಕ ಕೃತಿಗಳಾಗಿರುವ ದೀಪವಂಸೋ ಮಹಾವಂಸೋಗಳಲ್ಲಿ ಭಗವಾನ್ ಬುದ್ಧನ ನಿರ್ವಾಣದಿಂದ ೨೧೭ ವರ್ಷಗಳ ಸಮಯದಲ್ಲಿ ಸಾಮ್ರಾಟ್ ಅಶೋಕನ ರಾಜ್ಯಾಭಿಷೇಕವಾಗಿದೆಯೆಂಬ ಹಾಗೂ ಭ. ಬುದ್ಧನ ನಿರ್ವಾಣಕ್ಕಿಂತ ಒಂದೆರ್ಡು ವರ್ಷಗಳ ಮುಂಚಿತವಾಗಿ ಭಾ. ಮಹಾವೀರನ ನಿರ್ವಾಣವಾಗಿದೆಯೆಂಬ ತರ್ಕದಾಧಾರದಿಂದಾಗಿದೆ. ಅಶೋಕ ಸಾಮ್ರಾಟನ ರಾಜ್ಯಾಭಿಷೇಕವು ನಿಶ್ಚಿತ ಆಧಾರದನುಗುಣವಾಗಿ ಕ್ರಿ.ಪೂ. ೨೬೯ರಲ್ಲಿ ಆಗಿರುವುದಾದ್ದರಿಂದ ಭ. ಬುದ್ಧನು ( ೨೬೯+೨೧೭=) ಕ್ರಿ.ಪೂ. ೪೮೬ರಲ್ಲಿ ನಿರ್ವಾಣ ಹೊಂದಿರುವನು; ಈ ಸಮಯಕ್ಕಿಂತ ಒಂದೆರಡು ವರ್ಷ ಮುಂಚಿತವಾಗಿ ಭ. ಮಹಾವೀರನು ನಿರ್ವಾಣ ಹೊಂದಿದ್ದಾನೆಂಬ ತರ್ಕದನುಗುಣವಾಗಿ ಭ. ಮಹಾವೀರನ ನಿರ್ವಾಣವು ಕ್ರಿ.ಪೂ. ೪೮೭–೪೮೮ರಲ್ಲಿ ಆಗಿದೆಯೆಂಬ ನಿರ್ಣಯ ಮಾಡಿದ್ದಾರೆ.

ಈ ನಿರ್ಣಯ ಎಷ್ಟು ಪ್ರಮಾಣಬದ್ಧವಾಗಿದೆಯೆಂಬ ಪ್ರಶ್ನೆ ಇಲ್ಲದಿಲ್ಲ, ದಾಕ್ಷಿಣಾತ್ಯ ಬೌದ್ಧ ಪರಂಪರೆಗೆ ಸೇರಿದ ಸಿಲೋನ್, ಬರ್ಮಾ ಮತ್ತು ಸಯಾಂಗಳ ಸಂಪ್ರದಾಯದಂತೆ ಭ. ಬುದ್ಧನ ನಿವಾರ್ಣವು ಕ್ರಿ.ಪೂ. ೫೪೪ರಲ್ಲಿ ಆಗಿರುವುದೆಂದು ಗಣನೆಯಾಗುವುದು. ಹೀಗಿರುವಲ್ಲಿ ಸಿಲೋನಿನವೇ ಆದ ಐತಿಹಾಸಿಕ ಗ್ರಂಥಗಳಾದ ದೀಪವಂಸೋ ಮತ್ತು ಮಹಾವಂಸೋ ಕೃತಿಗಳಲ್ಲಿ ಹೇಳಿರುವ ಅಶೋಕ ಸಾಮ್ರಾಟನ ಅಭಿಷೇಕ ಸಮಯವು ನಿರ್ದುಷ್ಟವಾಘಿದೆ ಎಂದು ತಿಳಿಯುವುದಾದರೂ ಹೇಗೆ? ಮೇಲಾಗಿ ಔತ್ತರೇಯ ಸಂಪ್ರದಾಯದ ಬೌದ್ಧ ಕೃತಿಗಳು ಅಶೋಕನ ಕಾಲವನ್ನು ಹೇಳುವಲ್ಲಿ ದೀಪವಂಸೋ ಮತ್ತು ಮಹಾವಂಸೋ ಕೃತಿಗಳ ಹೇಳಿಕೆಯೊಡನೆ ಸಂವಾದಿಯಾಗಿಲ್ಲ ವೆಂಬುದನ್ನು

ಇಲ್ಲಿ ಪರಿಗಣನೆ ಮಾಡಬೇಕಾಗಿದೆ. ಉದಾಹರಣೆಯಾಗಿ ಟಿಬೆಟ್ಟಿನ ಬೌದ್ಧ ಸಂಪ್ರದಾಯದಂತೆ ಅಶೋಕನ ಕಾಲವನ್ನು ಹೇಳುವಲ್ಲಿ ಬುದ್ಧ ನಿರ್ವಾಣಾನಂತರದ ೧೧೦,೨೧೦ ಎಂಬ ಭಿನ್ನಮತಗಳಿವೆ. ಹೀಗೆಯೇ ಚೈನಾ ಬೈದ್ಧ ಸಂಪ್ರದಾಯದಂತೆ ಬುದ್ಧ ನಿರ್ವಾಣಾನಂತರದ ೧೧೬,೧೧೮,೧೩೦ ಮತ್ತು ೨೧೮ ಎಂಬ ನಾಲ್ಕು ಭಿನ್ನ ಮತಗಳಿವೆ. ( ಮಹಾವಂಸೋ–ಶ್ರೀ ಜೈಜೆರ್ ಅವರ ಅನುವಾಧ–ಪೀಠಿಕೆ ಪು.ix)

ಹೀಗಿರುವಲ್ಲಿ ಅಶೋಕ ಸಮ್ರಾಟನ ರಾಜ್ಯಾಭಿಷೇಕ ಸಮಯದ ಬಗ್ಗೆ ದೀಪವಂಸೋ ಮತ್ತು ಮಹಾವಂಸೋ ಕೃತಿಗಳ ಹೇಳಿಕೆಯು ಪ್ರಮಾಣಬದ್ಧ ಎಂದು ಒಪ್ಪುವುದಾದರೂ ಹೇಗೆಂಬ ಪ್ರಶ್ನೆಗೆ ಉತ್ತರವಿಲ್ಲ. ಆದ್ದರಿಂದ ಈ ನಿರ್ಣಯವು ಪ್ರಶ್ನಾರ್ಹವಾಗಿದೆ. ನಿರ್ಣಯಾತ್ಮಕವಾದುದಲ್ಲ.

ಐರೋಪ್ಯ ಸಂಶೋಧಕ ವಿದ್ವಾಂಸರು ಮತ್ತೂ ಒಂದು ದಿಶೆಯಿಂದ ಭ. ಮಹಾವೀರನ ನಿರ್ವಾಣಕಾಲದ ಬಗ್ಗೆ ಮೇಲೆ ಹೇಳಿದ ನಿರ್ಣಯವನ್ನು ಸಮರ್ಥಿಸಲು ಯತ್ನಿಸಿದರು, ಆದರೆ ಅದು ಅಷ್ಟಾಗಿ ಸಮರ್ಥಕವಾಗಲಿಲ್ಲ : ಹೇಮಚಂದ್ರಚಾರ್ಯರು ತ್ರಿಷಷ್ಟಿ ಶಲಾಕಾಪುರುಷ ಚರಿತದ ಪರಿಶಿಷ್ಟ ಪರ್ವದಲ್ಲಿ ಚಂದ್ರಗುಪ್ತನೊಬ್ಬನ ಬಗ್ಗೆ ತಮ್ಮ ಕಾಲದಲ್ಲಿ ಉಪಲಬ್ಧವಿದ್ದ ಕಥೆಯೊಂದನ್ನು ಹೇಳಿ ಆ ಚಂದ್ರಗುಪ್ತನು ಮಹಾವೀರನ ನಿರ್ವಾಣಾನಂತರದ ೧೫೫ ವರ್ಷಗಳ ತರುವಾಯದ ಸಮಯದಲ್ಲಿ ರಾಜ್ಯಭಾರಕ್ಕೆ ಬಂದನೆಂದು ಹೇಳಿದ್ದಾರೆ :

ಏವಂ ಚ ಶ್ರೀ ಮಹಾವೀರಮುಕ್ತೇರ್ವರ್ಷಶತೇ ಗತೇ ।

ಪಂಚಪಂಚಾಶದಧಿಕೇ ಚಂದ್ರಗುಪ್ತೋಭವನ್ನೃಪಃ ॥

ನಿಜವೆಂದರೆ ಇಲ್ಲಿ ಭ. ಮಹಾವೀರನ ನಿರ್ವಾಣ ಸಮಯದಿಂದ ೧೫೫ ವರ್ಷ ತರುವಾಯದಲ್ಲಿ ರಾಜ್ಯಭಾರಕ್ಕೆ ಬಂದ ಒಬ್ಬ ಚಂದ್ರಗುಪ್ತನ ಸಂಗತಿಯನ್ನು ಹೇಳಿದೆ. ಮೇಲಿನ ಶ್ಲೋಕವು ಪೂರ್ವಪರಂಪರೆಯಿಂದ ಬಂದದ್ದಾಗಿದ್ದು ಹೇಮಚಂದ್ರಾ ಚಾರ್ಯರು ಅದನ್ನು ಉಲ್ಲೇಖ ಮಾಡಿದ್ದಾರೆ. ಚರಿತ್ರೆಯ ಆಧುನಿಕ ವಿದ್ವಾಂಸರು ಈಹೇಳಿಕೆಯನ್ನು ಭ. ಮಹಾವೀರನ ನಿರ್ವಾಣ ಕಾಲ ನಿರ್ಣಯಕ್ಕೆ ಸಹಕಾರಿಯಾದುದನ್ನಾಗಿ ಗಣನೆ ಮಾಡಿದರು. ಮೌರ್ಯ ಚಂದ್ರಗುಪ್ತನು ಕ್ರಿ.ಪೂ. ೩೨೧ರಲ್ಲಿ ರಾಜ್ಯಭಾರ ಹೊಂದಿದನಾಗಿ ಭ. ಮಹಾವೀರನು (೩೨೧+೧೫೫=) ಕ್ರಿ.ಪೂ. ೪೭೬ರಲ್ಲಿ

ನಿರ್ಮಾಣ ಹೊಂದಿರುವನೆಂದು ಗಣನೆ ಮಾಡಲಾಯಿತು ಆದರೆ ಮಹಾವಂಸೋ ಹೇಳಿಕೆಯಾಧಾರದಿಂದ ಭ. ಗೌತಮಬುದ್ಧನು ಕ್ರಿ. ಪೂ. ೪೮೬ರಲ್ಲಿ ನಿರ್ವಾಣ ಹೊಂದಿರುವನೆಂಬುದನ್ನು ನಿರ್ಣಯಾತ್ಮಕವಾಗಿ ಗ್ರಹಿಸಿ ಈ ಸಮಯಕ್ಕಿಂತ ಕನಿಷ್ಟ ಮಿತಿಯಿಂದ ಒಂದೆರಡು ವರ್ಷಗಳಷ್ಟಾದರೂ ಮುಂಚಿತವಾಗಿ ಭ. ಮಹಾವೀರನು ನಿರ್ಮಾಣ ಹೊಂದಿರುವನೆಂಬುದಾದ ಪರ್ಯಾಲೋಚನೆಯ ಪರಿಣಾಮವಾಗಿ ಮೇಲಿನ ಶ್ಲೋಕದಾಧಾರದಿಂದ ನಿರ್ಣಯಿಸಲಾದ ಕಾಲಗಣನೆಯನ್ನು ಕೈಬಿಡಲಾಯಿತು. ಹೇಮ ಚಂದ್ರಚಾರ್ಯರು, ಭ. ಮಹಾವೀರನು ಕ್ರಿ. ಪೂ. ೫೨೭–೨೮ರಲ್ಲಿ ನಿರ್ವಾಣ ಹೊಂದಿರುವನೆಂಬುದನ್ನು ಸಮರ್ಥಿಸುವ ಅಭಿಮತ ಹೊಂದಿದ್ದರೆಂದು ಹೇಳಬಹುದಾಗಿದೆ. ಕುಮಾರ ಪಾಲನ ರಾಜ್ಯಾಭಿಷೆಕದ ಸಮಯದ ಬಗ್ಗೆ (ಶ್ರೇಣೀಕನ ಮಗನಾದ) ಅಭಯನಿಗೆ ಭ. ಮಹಾವೀರನಿಂದ 'ನಮ್ಮ ನಿರ್ವಾಣದಿಂದ ೧೬೬೯ನೇ ವರ್ಷದಲ್ಲಿ ಕುಮಾರಪಾಲನ ರಾಜ್ಯಾಭಿಷಕವಾಗುವುದು' ಎಂಬ ಭವಿಷ್ಯವಾಣಿಯನ್ನು ಹೇಳಿಸಲಾಗಿದೆ.

ಪರಿಶಿಷ್ಟ ಪರ್ವ

> ಅಸ್ಮನ್ನಿರ್ವಾಣತೋ ವರ್ಷಶತಾನ್ಯಭಾಯ ಷೋಡಶ ।
> ನವಷಷ್ಟಿಶ್ಚ ಯಾಸ್ಯಂತಿ ಯದಾ ತತ್ರ ಪುರೇ ತದಾ ॥೧೪೫॥
> ಕುಮಾರಪಾಲಭೂಪಾಲಶ್ಚೌಲುಕ್ಯಕುಲಚಂದ್ರಮಾಃ ।
> ಭವಿಷ್ಯತಿ ಮಹಾಬಾಹುಃ ಪ್ರಚಂಡ ಖಂಡ ಶಾಸನಃ ॥೧೪೬॥

ಇದರಂತೆ ಕುಮಾರಪಾಲನ ರಾಜ್ಯಾಭಿಷೇಕವು ಕ್ರಿ. ಶ. (೧೬೬೯–೫೨೭=) ೧೧೪೨ರಲ್ಲಿ ಆಗಿರುವದೆಂದು ಸೂಚಿತವಾಗುವುದು. ಕುಮಾರಪಾಲನಿಂದ ಹಿಂದೆ ರಾಜನಾಗಿದ್ದ ಸಿದ್ಧರಾಜ ಜಯಸಿಂಹನ ರಾಜ್ಯಭಾರವು ವಿ.ಸಂ. ೧೧೯೯ರಲ್ಲಿ ಎಂದರೆ ಕ್ರಿ.ಶ.೧೧೪೧ರಲ್ಲಿ ಕೊನೆಗೊಂಡಿದೆಯೆಂದು ಸಾಧಾರವಾಗಿ ಹೇಳಿದೆ. ಈ ಗಣನೆಯಂತೆ ಭ. ಮಹಾವೀರನು ಕ್ರಿ. ಪೂ. ೫೨೭ರಲ್ಲಿ ನಿರ್ವಾಣ ಹೊಂದಿರುವನೆಂಬುದು ಹೇಮಚಂದ್ರಾಚಾರ್ಯರ ಅಭಿಮತವಾಗಿದೆಯೆಂದು ಸ್ಪಷ್ಟವಾಗುವುದು.

ಶ್ವೇತಾಂಬರ ಜೈನ ಧರ್ಮಪಂಥದ ಹೇಮಚಂದ್ರಾಚಾರ್ಯರಂತೆ ದಿಗಂಬರ ಜೈನಧರ್ಮ ಪಂಥವರಾದ ಮಾಘನಂದಿ ಸಿದ್ಧಾಂತ ದೇವರೂ ಭ. ಮಹಾವೀರನು ಕ್ರಿ.ಪೂ. ೫೨೭ರ ಸಮಯದಲ್ಲಿ ನಿರ್ವಾಣ ಹೊಂದಿರುವನೆಂಬ ಅಭಿಮತವುಳ್ಳವರಾಗಿರುವುದು ಅವರ ಮುಂದಿನ ಹೇಳಿಕೆಗಳಿಂದ ವ್ಯಕ್ತವಾಗುವುದು.

(೧) "ಮತ್ತಂ ಈ ಆಚಾರಾಂಗಧರರ ಬಳಿಕಂ ೧೦೨ನೇ ಹೇಮಣಂಬಿಯಂದೀ ಶಾಸ್ತ್ರಸಾರ ಸಮುಚ್ಚಯಮ ಪುಟ್ಟಿತು. ಇಲ್ಲಿಂದ ಮುಂದೆ ೧೯೨೩೫ ವರ್ಷಕಾಲ (ಶ್ರೀ ವೀರತೀರ್ಥಂಕರನ) ತೀರ್ಥವು ಪ್ರವರ್ತಿಸುವುದು" ( ಶಾಸ್ತ್ರಸಾರ, ಪು. ೨೭)

(೨) "ಮರ್ಧಮಾನ ತೀರ್ಥಂಕರರ ಬಳಿಕ ೬೮೩ ವರ್ಷಪರ್ಯಂತ ಶ್ರುತಧರ ಆಚಾರ್ಯರು.... ಸಾಸಿರದ ತೊಂಭತ್ತೇಳನೆಯ (೧೯೭) ಪರಿಧಾವಿ ಸಂವತ್ಸರದ ಜ್ಯೇಷ್ಠಶುದ್ಧ ಪಂಚಮಿಯದಿನಮೀ ಶ್ರಾವಕಾಚಾರ ಶ್ರುತಂ ಪ್ರತಿಷ್ಠಿತಮಾಯ್ತು ಅಂತು ಸಾಸಿರದೇಳ್ನೂರೆಂಭತ್ತು ವರ್ಷಂಕ್ಕುಂ ಮುಂದಿನ್ನು ವೀರಸ್ವಾಮಿಯ ಕಾಲಂ ಪತ್ತೊಂಭತ್ತು ಸಾಸಿರದ ಇನ್ನೂರಿಪ್ಪತ್ತು (೧೯೨೨೦) ವರ್ಷಂ ಪ್ರವರ್ತಿಸುಗುಂ" (ಮೈಸೂರು ಓರಿ ಯೆಂಟಲ್ ಲೈಬ್ರರಿ ಕೈ ಬರಹದ ಪ್ರತಿ, ಕೆ. ಬಿ. ೯೬)

ಮೇಲೆ ಹೇಳಿರುವ ಶಾಸ್ತ್ರಸಾರದ (೧ನೆಯ) ಹೇಳಿಕೆಯಂತೆ 'ಶಾಸ್ತ್ರಸಾರ' ಹುಟ್ಟಿದ ದಿನಕ್ಕೆ ಮ. ವೀ. ನಿರ್ವಾಣದಿಂದ ಆಚಾರಾಂಗ ಶ್ರುತಧರರ ಪರ್ಯಂತದ ಕಾಲ ೬೮೩ ವರ್ಷ+ ಅಲ್ಲಿಂದ ಮುಂದಿನ ೧೦೮೨ ವರ್ಷ– ಒಟ್ಟು ೧೭೬೫ ವರ್ಷಗಳಾಗುವುವು. ಇದರಂತೆ ಮ.ವೀ.ನಿ. ಸಂವತ್ ೧೭೬೫ರಲ್ಲಿ ಶಾಸ್ತ್ರಸಾರದ ರಚನೆ ಪೂರ್ಣವಾಗಿದೆ ಎಂದು ವ್ಯಕ್ತವಾಗುವುದು. ದಿಗಂಬರ ಜೈನ ಪಂಥದ ಆಂನಾಯಾನುಸಾರ ಭ. ಮಹಾವೀರ ನಿರ್ವಾಣದಿಂದ (೬೦೫ವ,೫ತಿ) ೬೦೬ನೇ ವರ್ಷದಲ್ಲಿ ಶಾ. ಶಕೆ ಹುಟ್ಟಿದೆ. ಆದ್ದರಿಂದ (೧೭೬೫–೬೦೫=) ಶಾ.ಶಕ ೧೧೬೦ರಲ್ಲಿ ಎಂದರೆ ಕ್ರಿ.ಶ. ೧೨೩೮ರಲ್ಲಿ ಶಾಸ್ತ್ರಸಾರದ ರಚನೆ ಪೂರ್ಣಗೊಂಡಿದೆಯೆಂದು ಸಿದ್ಧವಾಗುವುದು. ಈ ವರ್ಷವು ಹೇಮಣಂಬಿ ಸಂವತ್ಸರವೂ ಆಗಿದೆ. ಈ ಕ್ರಿ.ಶ. ೧೨೩೮ಕ್ಕೆ ಕ್ರಿ. ಪೂರ್ವದ ೫೨೭ನ್ನು ಸೇರಿಸಿದಲ್ಲಿ ಶಾಸ್ತ್ರಸಾರದ ರಚನೆ ಪೂರ್ಣವಾದ ಸಮಯಕ್ಕೆ ಸಲ್ಲುವ ಮ.ವೀ.ನಿ. ಶಕೆ (೧೨೩೮+೫೨೭=) ೧೭೬೫

ಸಲ್ಲುವುದಾದ್ದರಿಂದ ಕ್ರಿ.ಪೂ. ೫೨೭ರ ಸಮಯದಲ್ಲಿ ಭಗವಾನ್ ಮಹಾವೀರನು ನಿರ್ವಾಣ ಹೊಂದಿರುವನೆಂದು ಗಣನೆಯಾಗುವುದು.

ಇದೇ ರೀತಿಯಿಂದ ಮೇಲಿನ ೨ನೇ ಹೇಳಿಕೆಯನ್ನೂ ಪರಿಶೀಲಿಸಬಹುದು ಆಚಾರಾಂಗಧರದ ಪರ್ಯಂತ ಕಾಲ ೬೮೩ ವರ್ಷ. ಅಲ್ಲಿಂದ ೧೦೯೭ ವರ್ಷವೆಂದರೆ ಮ.ವೀ.ನಿ. ಶಕ (೬೮೩+೧೦೯೭=) ೧೭೮೦ ಆಗುವುದು. ಇದರಲ್ಲಿ ೫೨೭ಅನ್ನು ಕಳೆದಲ್ಲಿ ಕ್ರಿ.ಶ. (೧೭೮೦–೫೨೭=) ೧೨೫೩ರಲ್ಲಿ ಅಥವಾ ಶಾ. ಶಕ (೧೨೫೩೦೭೮=) ೧೧೭೫ರಲ್ಲಿ ಶ್ರಾವಕಾಚಾರದ ರಚನೆ ಪೂರ್ಣಗೊಂಡಿದೆಯೆಂದು ವ್ಯಕ್ತವಾಗುವುದು. ಈ ವರ್ಷವು ಪರಿಧಾವಿ ಸಂವತ್ಸರಮೂ ಆಗಿದೆ ಈ ಗಣನೆಯಂತೆಯೂ ಭಗವಾನ್ ಮಹಾವೀರನು ಕ್ರಿ. ಪೂ. ೫೨೭ ವರ್ಷಗಳ ಹಿಂದೆ ನಿರ್ವಾಣ ಹೊಂದಿರುವನೆಂಬ ಅಭಿಮತದ ಗಣನೆ ಸಿದ್ಧವಾಗುವುದು.

ಈ ಮೇಲ್ಕಂಡ ನಿರೂಪಣೆಯಂತೆ ಶ್ವೇತಾಂಬರ ಜೈನ ಪಂಥ ಮತ್ತು ದಿಗಂಬರ ಜೈನ ಪಂಥಗಳೆರಡರಲ್ಲಿಯೂ ಅನೂಚಾನವಾಗಿ ಭ. ಮಹಾವೀರನ ನಿರ್ವಾಣವು ಕ್ರಿ. ಪೂ. ೫೨೭ ವರ್ಷಗಳ ಹಿಂದೆ ಆಗಿದೆಯೆಂಬ ಅಭಿಮತವಿದ್ದುದು ಸುವ್ಯಕ್ತವಿದೆ.

ಭ. ಮಹಾವೀರ ಮತ್ತು ಭ. ಬುದ್ಧನ ನಿರ್ವಾಣ ಕಾಲಗಳ ಸಮಸ್ಯೆ ಪರಸ್ಪರ ಒಂದರೊಡನೊಂದು ಸರಪಳಿಯ ಕೊಂಡಿಯಂತೆ ಸೇರಿಕೊಂಡಿವೆ. ಭ. ಮಹಾವೀರನು ಕ್ರಿ.ಪೂ. ೫೨೭ರ ಸಮಯದಲ್ಲಿ ನಿರ್ಮಾಣ ಹೊಂದಿರುವನೆಂದಾದರೆ ಆ ಬಳಿಕ ಭಗವಾನ್ ಬುದ್ಧನೂ ದೀರ್ಘಕಾಲದ ಅಂತರವಿಲ್ಲದೆ ಒಂದೆರಡು ವರ್ಷಗಳಲ್ಲಿಯೇ ನಿರ್ಮಾಣ ಹೊಂದಿರಬೇಕೆಂಬುದು ಚರಿತ್ರೆಯ ತಥ್ಯ ಭ. ಬುದ್ಧನು ಅಜಾತಶತ್ರುವಿನ ೭ನೇ ಇಲ್ಲವೆ ೮ನೇ ವರ್ಷದ ರಾಜ್ಯಭಾರ ಕಾಲದಲ್ಲಿ ನಿರ್ವಾಣ ಹೊಂದಿದ್ದಾನೆ. ಇವನ ನಿರ್ವಾಣ ಸಮಯದಿಂದ ೧೦೦ ವರ್ಷಗಳ ಸಮಯಕ್ಕೆ ಕಾಲಾಶೋಕನ ೧೦ನೇ ವರ್ಷದ ರಾಜ್ಯಭಾರ ಕೂಡಿ ಬಂದಿದ್ದಿತು ಎಂಬಿವೇ ಮೊದಲಾದ, ಮಹಾವಂಸೋ ಮತ್ತಿತರ ಐತಿಹಾಸಿಕ ಕೃತಿಗಳ ಹೇಳಿಕೆಗಳಲ್ಲಿ ಕೆಲವಾದರೂ ಸಮಾಯೋಜಿತವಾಗಬೇಕಾಗಿದೆ. ಭ. ಬುದ್ಧನು ಕ್ರಿ.ಪೂ. ೫೨೫ನೇ ವರ್ಷದ ಮೇ ಮಾಹೆಯ ಮೊದಲ ವಾರದ ಆಸುಪಾಸಿನಲ್ಲಿ ನಿರ್ವಾಣ ಹೊಂದಿದ್ದಾನೆ. (ಈ ಎಲ್ಲ ಸಂಗತಿಗಳ ಹೆಚ್ಚಿನ ವಿಸ್ತೃತ

ವಿವರಣೆಗಾಗಿ ‘ಸನ್ಮತಿ ಶ್ರೀ ವಿಹಾರ ಪುಟ ೬೩ ಮತ್ತು ಮುಂದೆ ನೋಡಬೇಕು) ಭ. ಬುದ್ಧನ ನಿರ್ವಾಣ ಸಮಯದಿಂದ ೨೫೬ನೇ ವರ್ಷದಲ್ಲಿ (ಕ್ರಿ.ಪೂ. ೨೬೯ರಲ್ಲಿ) ಅಶೋಕ ಸಮ್ರಾಟನ ರಾಜ್ಯಾಭಿಷೇಕವಾಗಿದೆ. ಈ ನಿರ್ಣಯವು ಅಶೋಕ ಸಾಮ್ರಾಟನ ಲಘು ಬಂಡೆ ಶಾಸನ (ಮೈನರ್ ರಾಕ್ ಎಡಿಕ್ಟ್ ನ್) ೧ರ ಬುದ್ಧಪರಿನಿರ್ವಾಣ ಸಂಬಂಧಿ ‘೨೫೬’ ಎಂಬ ಕಾಲಗಣನೆಯೊಡನೆ ಸಂವಾದಿಯಾಗಿದನ್ನು ಗಮನಿಸಬಹುದು. ಆದರೆ ಮಹಾವಂಸೋ ಕ್ಇರ್ತಿಯ ಹೇಳಿಕೆಯಾದ ‘೨೧೮’ ವರ್ಷ ಅಥವಾ ೨೧೯ನೇ ವರ್ಷದಲ್ಲಿ ಅಶೋಕ ಸಾಮ್ರಾಟ್ ನ ರಾಜ್ಯಾಭಿಷೇಕವಾಗಿದೆ ಎಂಬುದೇ ತಥ್ಯನಿಷ್ಠವಾಗಿದೆ ಎಂದು ನಿರೂಪಿಸ ಲೋಸುಗ ‘೨೫೬’ ಎಂಬ ಕಾಲಗಣನೆಗೆ ಬೇರೆಯದೇ ಆದ ಅರ್ಥವನ್ನು ಕಲ್ಪನೆ ಮಾಡಲಾಗಿದೆ. ಹೀಗಿದ್ದರೂ ಮ. ವಂಸೋದ ಈ ಹೇಳಿಕೆಯ ತಥ್ಯವನ್ನು ಸ್ವಲ್ಪಮಾತ್ರದ ವ್ಯತ್ಯಾಸದೊಡನೆ ನಿರೂಪಿಸಬಹುದಾಗಿದೆ. ಭ. ಬುದ್ಧನ ನಿರ್ವಾಣದಿಂದ ೨೧೯ನೇ ವರ್ಷದಲ್ಲಿ ಅಶೋಕ ಸಾಮ್ರಾಟನ ರಾಜ್ಯಾಭಿಷೇಕವಾಗಿರದೆ ಅವನು ಜನಿಸಿದ ಕಾಲವಾಗಿದೆಯೆಂದು ಮತ್ತು ಅವನು ತನ್ನ ೩೭ ನೇ ವರ್ಷದಲ್ಲಿ ರಾಜ್ಯಭಾರ ಹೊಂದಿರುವನೆಂದು ತಿಳಿಯಬಹುದಾಗಿದೆ. ಈ ರೀತಿಯಿಂದ ಭಗವಾನ್ ಬುದ್ಧನು ಕ್ರಿ.ಪೂ. ೫೨೫ರ ಮೇ ಮಾಹೆಯ ಆರಂಭದ ಸಮಯದಲ್ಲಿ ನಿರ್ವಾಣ ಹೊಂದಿರುವನೆಂಬ ನಿರೂಪಣೆಯು ಸ್ಥಿರಪಡುವುದಾದ್ದರಿಂದಿ, ಈ ಸಮಯದಿಂದ ಸುಮಾರು ಎರಡು ವರ್ಷ ಆರು ತಿಂಗಳುಗಳ (೨ವ. ೬ತಿಂ.) ಮುಂಚಿತವಾಗಿ– ಎಂದರೆ ಕ್ರಿ.ಪೂ. ೫೨೮ ನವೆಂಬರ್ ಮಾಹೆ ಆರಂಭ ಸಮಯದಲ್ಲಿ ಭಗವಾನ್ ಮಹಾವೀರನು ನಿರ್ವಾಣ ಹೊಂದಿರುವನೆಂಬ ಹಿಂದಿನ ನಿರೂಪಣೆ ಅಬಾಧಿತವಾಗಿ ಸಿದ್ಧವಾಗುವುದು.

ಇಲ್ಲಿ ಮತ್ತೊಂದು ಮುಖ್ಯ ವಿಷಯವನ್ನು ಗಮನಕ್ಕೆ ತಂದುಕೊಳ್ಳಬೇಕಾದ ಅಗತ್ಯವಿದೆ. ಶ್ರುತಕೇವಲಿ ಭಾದ್ರಬಾಹುಸ್ವಾಮಿಯವರು ಚಂದ್ರಗುಪ್ತ ರಾಜನಿಗೆ ಮುನಿ ದೀಕ್ಷೆಕೊಟ್ಟು ಮುನಿ ಸಂಘ ಸಹಿತ ಉಜ್ಜಯಿನಿಯಿಂದ ದಕ್ಷಿಣಾಪಥಕ್ಕೆ ಪಯಣ ಮಾಡಿ ಶ್ರವಣಬೆಳಗುಳದಲ್ಲಿ ಸಮಾಧಿ ಮರಣ ಪಡೆದ ಸಂಗತಿ ವಿಶ್ರುತ ಐತಿಹ್ಯ ಸಂಗತಿಯಾಗಿದೆ . ಆದರೆ ಶ್ರುತಕೇವಲಿ ಭದ್ರಬಾಹುಸ್ವಾಮಿಯವರಿಂದ ಮುನಿದೀಕ್ಷೆ ಪಡೆದು ಮುನಿಸಂಘದೊಡನೆ ದಕ್ಷಿಣಾಪಥಕ್ಕೆ ಪಯಣ ಮಾಡಿದ ಚಂದ್ರಗುಪ್ತ ಯಾರು ಎಂಬುದು ಪ್ರಶ್ನೆಯಾಗಿದೆ. ಶ್ರೀ ಗೋವಿಂದ ಪೈ ಅವರು ಕನ್ನಡ

ವಡ್ಡಾರಾಧನೆಯ ಕಥೆಯನ್ನಾಧರಿಸಿ ಇವನು ಅಶೋಕ ಸಾಮ್ರಾಟನ ಮೊಮ್ಮಗ ಸಂಪ್ರತಿ ಚಂದ್ರ ಗುಪ್ತನೆಂದು ನಿರೂಪಿಸಿದ್ದಾರೆ. ಇನ್ನು ಐರೋಪ್ಯ ವಿದ್ವಾಂಸರು ಈ ಚಂದ್ರಗುಪ್ತನನ್ನು ಮೌರ್ಯ ಚಂದ್ರಗುಪ್ತನೆಂದು ಗುರುತಿಸಿದ್ದಾರೆಂಬುದಲ್ಲದೆ ಇದು ಬಹುಮತದ ಅಭಿಮತವೂ ಆಗಿದೆ. ಆದರೆ ಈ ಅಭಿಮತಗಳು ಪ್ರಶ್ನಾತೀತವಾಗಿಲ್ಲ. ಜೈನ ಪರಂಪರಾಗತ ಸಂಪ್ರದಾಯದ ಕಥನದಂತೆ ಶ್ರು. ಕೇವಲಿ ಭದ್ರಬಾಹು ಸ್ವಾಮಿಯವರು ಮ.ವೀ.ನಿ. ಶಕೆ ೧೬೨ ರಲ್ಲಿ ( ಅಥವಾ ಶ್ವೇತಾಂಬರ ಪಂಥದ ಐತಿಹ್ಯಾನುಸಾರ್ ಮ. ವೀ.ನಿ. ಶಕೆ ೧೭೦ ರಲ್ಲಿ) ದಿವಂಗತರಾಗಿದ್ದಾರೆ. ಮೌರ್ಯ ಚಂದ್ರಗುಪ್ತನು ಕ್ರಿ.ಪೂ. ೩೨೧-೩೨೨ ರಲ್ಲಿ ರಾಜ್ಯಾಭಿಷೇಕ ಹೊಂದಿ ೨೪ ವರ್ಷಕಾಲ ರಾಜ್ಯವಾಳಿರುವನೆಂದು ನಿರ್ಣಯಾತ್ಮಕವಾಗಿ ಒಪ್ಪಲಾಗಿದೆ. ಆದ್ದರಿಂದ ಇವನು ಕ್ರಿ.ಪೂ. ೨೯೭ ರಲ್ಲಿ (ಮ.ವೀ.ನಿ. ಶಕೆ ೨೪೦ ರಲ್ಲಿ ಇಲ್ಲವೆ ಯೂರೋಪೀಯರ ಅಭಿಮತದ 'ಭ. ಮಹಾವೀರನು ಕ್ರಿ.ಪೂ. ೪೮೭ ರಲ್ಲಿ ನಿರ್ವಾಣ ಹೊಂದಿರುವ' ನೆಂಬ ಗಣನೆಯಂತೆ ಮ.ವೀ.ನಿ. ಸಂವತ್ ೪೮೭-೨೯೭=೧೯೦ ರಲ್ಲಿ ಮುನಿದೀಕ್ಷೆ ಪಡೆದಿರುವನೆಂದಾಗುವುದು. ಇದು ಪರಂಪರಾಗತ ಐತಿಹ್ಯದೊಡನೆ ಸರ್ವಥಾ ಸಂಗತವಾಗುವುದಿಲ್ಲ. ಇದರಂತೆ ಈ ಚಂದ್ರಗುಪ್ತನು ಅಶೋಕ ಸಾಮ್ರಾಟನ ಮೊಮ್ಮಗ ಸಂಪ್ರತಿ ಚಂದ್ರಗುಪ್ತನಾಗಲಿ, ಇಲ್ಲವೆ ಮೌರ್ಯ ಚಂದ್ರುಗ್ರಪ್ತನಾಗಲಿ ಆಗಿರುವನೆಂಬ ಅಭಿಪ್ರಾಯವು ಸಂಗತವಾಗುವುದಿಲ್ಲ. ಆದ್ದರಿಂದ ಶ್ರು. ಕೇ. ಭದ್ರಬಾಹುಸ್ವಾಮಿಯವರು ದಿವಂಗತರಾದ ಕಾಲದ ಬಗ್ಗೆ ಇರುವ ಸಾಂಪ್ರದಾಯಿಕ ಕಾಲಗಣನೆಯನ್ನೇ ತಪ್ಪೆಂದು ನಿರಾಕರಿಸುವುದರ ಬದಲಾಗಿ ಈ ಕಾಲಗಣನೆಗೆ ಸಂಗತವೆನಿಸುವಂತೆ ಮತ್ತೆ ಯಾರಾದರೊಬ್ಬ ಚಂದ್ರಗುಪ್ತನ ಐತಿಹಾಸಿಕ ಸಂಗತಿ ಉಪಲಬ್ಧವಾಗಬಹುದೆ ? ಎಂಬುದನ್ನು ಶೋಧಿಸುವುದು ಸಂಗತವೆನಿಸುವುದು.

ಶ್ವೇತಾಂಬರ ಜೈನಪಂಥದ ಐತಿಹ್ಯದನುಸಾರ ಶ್ರು. ಕೇ. ಭದ್ರಬಾಹುಸ್ವಾಮಿಯವರ ಬಳಿಕ ಸ್ಥೂಲಭದ್ರಾಚಾರ್ಯರು ೪೫ ವರ್ಷಗಳ ಕಾಲ ಸಂಘಾಧಿಪತಿ ಪ್ರಧಾನರಾಗಿದ್ದರು. ಇವರು ಚಂದ್ರಗುಪ್ತನಿಂದ ಒಂಭತ್ತನೇ ನಂದನ ವರ್ಷದಲ್ಲಿಯೇ ದಿವಂಗತರಾಗಿದ್ದಾರೆಂದು ತಪಾಗಚ್ಛ ಪಟ್ಟಾವಲಿಯಲ್ಲಿ ಹೇಳಿದೆ. (ಇಂಡಿಯನ್ ಆಂಟಿಕ್ವೆರಿ, ವಾಲ್ಯೂಂ **xi p.251,** ಫುಟ್ ನೋಟ್ ೩೫). ಒಂಭತ್ತನೇ ನಂದನನ್ನು ವಧೆಮಾಡಿ ಚಂದ್ರಗುಪ್ತನು ಕ್ರಿ. ಪೂ. ೩೨೧ರಲ್ಲಿ ರಾಜ್ಯ ಭರದಲ್ಲಿ

ಅಭಿಷಿಕ್ತನಾಗಿರುವನೆಂಬುದು ಈಗ ದೃಢಪಟ್ಟ ಐತಿಹಾಸಿಕ ಸಂಗತಿಯಾಗಿದೆ. ಈ ಚಂದ್ರಗುಪ್ತನೇ, ಮೌರ್ಯ ಚಂದ್ರಗುಪ್ತನೆಂಬುದೂ ಈಗ ನಿರ್ಣಯಗೊಂಡ ಸಂಗತಿಯಾಗಿದೆ. ಆದ್ದರಿಂದ ಈ ಸಮಯದಿಂದ ೪೪ ವರ್ಷಗಳಷ್ಟು ಪೂರ್ವದಲ್ಲಿ ಶು. ಕೇ. ಭದ್ರಬಾಹು ಸ್ವಾಮಿಯವರಿಂದ ಮುನಿದೀಕ್ಷೆ ಪಡೆದು ಮುನಿ ಸಂಘದೊಡನೆ ಉಜ್ಜೈನಿಯಿಂದ ದಕ್ಷಿಣಾಪಥಕ್ಕೆ ಪಯಣ ಮಾಡಿದ ಚಂದ್ರಗುಪ್ತನು ಮೌರ್ಯ ಚಂದ್ರಗುಪ್ತನಾಗಿರದೆ ಬೇರೊಬ್ಬ ಚಂದ್ರಗುಪ್ತನಾಗಿರಬೇಕು ಮತ್ತು ಈ ಚಂದ್ರಗುಪ್ತನು ಹೇಮಚಂದ್ರಾಚಾರ್ಯರು ಉಲ್ಲೇಖಿಸಿರುವ ಶ್ಲೋಕಗತ ಹೇಳಿಕೆಯನುಗುಣವಾಗಿ ಮ.ವೀ.ನಿ. ಸಂವತ್ ೧೫೫ನೇ ವರ್ಷದ ತರುವಾಯದಲ್ಲಿ ರಾಜ್ಯಭಾರಹೊಂದಿದ ಚಂದ್ರಗುಪ್ತನಾಗಿರಬೇಕೆಂದು ತಿಳಿಯಬಹುದಾಗಿದೆ. ವಾಯುಪುರಾಣದಲ್ಲಿ ಮೌರ್ಯರಾಜ್ಯಭಾರಕ್ಕಿಂತ ಮುನ್ನ 'ನಂದೇಂದು' (ನಂದ ಚಂದ್ರ) ಒಂಬುವನು ರಾಜ್ಯಭಾರ ಮಾಡಿದನೆಂದು ಹೇಳಿದೆ. ಮೌರ್ಯ ಚಂದ್ರಗುಪ್ತನನ್ನು 'ಮೌರ್ಯೇಂದು' ಎಂದು ಮುದ್ರಾರಾಕ್ಷಸ ನಾಟಕದಲ್ಲಿ ಹೆಸರಿಸಿದೆ. ಇದರಂತೆ 'ನಂದೇಂದು' ಎಂಬುದು 'ನಂದ ಚಂದ್ರಗುಪ್ತ'ನ ಸೂಚಕವಾಗಿದೆಯೆಂದು ತಿಳಿಯಬಹುದಾಗಿದೆ. ಇವನು ಕಾಲಾಶೋಕನ ಮೊಮ್ಮಗ (ಕುರುಡ) ಸಿಂಹಸೇನನ ಮಗ. ಕಾಲಾಶೋಕನ ಕಾಲಾದಲ್ಲಿ ಸಿಂಹಸೇನನು ಉಜ್ಜಯಿನಿಯಲ್ಲಿ ರಾಜಪ್ರತಿನಿಧಿಯಾಗಿದ್ದನು. ಕಾಲಶೋಕನ ತರುವಾಯ ಪಾಟಲಿಪುತ್ರ ನಗರದಲ್ಲಿ ಮಹಾಪದ್ಮನಂದನು ಸರ್ವಾಧಿಕಾರಿಯಾಗಿ ಬೆಳೆದನು. ಇದೇ ಸಮಯದಲ್ಲಿ ಸಿಂಹಸೇನನು ತನ್ನ ಮಗ ಚಂದ್ರಗುಪ್ತನಿಗೆ ಮಗಧ ಸರ್ವಾಧಿಕಾರಿಯಾಗಿ ಬೆಳೆದ ಕ್ಷತ್ರಿಯ ಕುಲಾಂತಕ ಮಹಾಪದ್ಮನಂದನಿಂದ ಪ್ರಜಾಪೀಡೆ ಅವ್ಯಾಹತವಾಗಿ ಸಾಗಿತು. ದಿಗಂಬರ ಮುನಿಗಳ ಧರ್ಮಪಾಲನೆಗೆ ಪ್ರತಿರೋಧವುಂಟಾಗಿ ಅವರಿಗೆ ಅಪರಿಹಾರ್ಯ ಸಂಕಟ ಪ್ರಾಪ್ತವಾಯಿತು. ವಿಹಾರಕ್ರಮದಿಂದ (ಪ್ರಯಶಃ ಸಂಕಟಗಳನ್ನು ಎದುರಿಸುತ್ತಾ) ಇಜ್ಜಯಿನಿಗೆ ಮುನಿಸಂಘಸಹಿತ ಬಂದ ಶು.ಕೇ. ಭದ್ರಬಾಹು ಸ್ವಮಿಯವರು ಉತ್ತರಾಪಥದಲ್ಲಿ ನಿರತೀಚಾರುವಾಗಿ ಧರ್ಮಪಾಲನೆ ಮಾಡುವುದು ಅಸಾಧ್ಯ ಎಂಬುದನ್ನು ಮನಗಂಡರು. ಅಲ್ಲಿ ಮಗಧ ಸಾಮ್ರಾಜ್ಯದ ಸಾಮ್ರಾಟನಗಿದ್ದ ನಂದ ಚಂದ್ರಗುಪ್ತನಿಗೆ  ಮಹಾಪದ್ಮನ ಸಶಕ್ತ ನಿರಂಕುಶ ಸಾಏವಭೌಮತ್ವಕ್ಕೆ ತಾನು ಅಡಿಯಾಳಾಗಿ ಬದುಕಬೇಕಾಗಿದ್ದ ಅರಿವಾಗಿದ್ದಿತು. ಈ ಅಸಹ್ಯ ದುಃಸ್ಥಿತಿಯಿಂದ ಪಾರಾಗಲು ಅವನಿಗೆ ಸಂನ್ಯಾಸ ತೆಗೆದುಕೊಳ್ಳುವುದೊಂದೇ ಮಾರ್ಗ

ಉಳಿದಿದ್ದಿತು. ಈ ಸಮಯಕ್ಕೆ ಶ್ರು. ಕೇ. ಭದ್ರಬಾಹು ಸ್ವಾಮಿಯವರು ಉತ್ತರಾಪಥವನ್ನು ತ್ಯಜಿಸಿ ಮುನಿಸಂಘದೊಡನೆ ದಕ್ಷಿಣಾಪಥದತ್ತ ಪಯಣ ಕೈಗೊಳ್ಳಲು ನಿರ್ಧರಿಸಿದ್ದ ಸಂಗತಿ ಅವನಿಗೆ ಸಂಕಟದಿಂದ ಪಾರಾಗುವ ದಾರಿಯಾಯಿತು. ಅದರಂತೆ ಅವನು ಶ್ರು. ಕೇ. ಭದ್ರಬಾಹು ಸ್ವಾಮಿಯವರಿಂದ ಮುನಿದೀಕ್ಷೆ ಪಡೆದು ಮುನಿಸಂಘದೊಡನೆ ದಕ್ಷಿಣಾಪಥದತ್ತ ಪಯಣ ಮಾಡಿದ್ದಾನೆ. ಹೀಗೆ ಮ. ವೀ.ನಿ.ಸಂ.೧೫೬ರಲ್ಲಿ ರಾಜ್ಯಭಾರ ಹೊಂದಿದ ನಂದ ಚಂದ್ರಗುಪ್ತನ ರಾಜ್ಯಭಾರವು ವೀ.ನಿ.ಸಂ. ೧೬೧ರಲ್ಲಿ ಕೊನೆಗೊಂಡಿದೆ. ಶ್ರು. ಕೇ. ಭದ್ರಭಾಹುಸ್ವಾಮಿಯವರು ದಕ್ಷಿಣಾ ಪಥಕ್ಕೆ ಪಯಣ ಕೈಗೊಂಡ ಬಳಿಕ, ಉತ್ತರಾಪಥದಲ್ಲಿಯೇ ಉಳಿದಿದ್ದ ಮುನಿಸಂಘದ ಆಚಾರ್ಯ ಪ್ರಧಾನರಾಗಿ ಸ್ಥೂಲಭದ್ರಸ್ವಾಮಿಯವರು ಮ. ವೀ. ನಿ. ಸಂವತ್ ೧೬೧ರಲ್ಲಿ ಪಟ್ಟಸ್ಥರಾದರು. ಶ್ರು. ಕೇ. ಭದ್ರಬಾಹುಸ್ವಾಮಿಯವರು ದಕ್ಷಿಣಾಪಥದಲ್ಲಿ ವಿಹಾರಾನುಕ್ರಮದಿಂದ ಕಾಳ್ಬಪ್ಪು (ಶ್ರ. ಬೆಳಗುಳವನ್ನು) ಸೇರಿ, ಅಲ್ಲಿ ಮ.ವೀ.ನಿ. ಶಕೆ ೧೬೨ರಲ್ಲಿ (ಕ್ರಿ. ಪೂ. ೩೬೫ರಲ್ಲಿ) ಸಮಾಧಿಮರಣ ಹೊಂದಿದ್ದಾರೆ.(ಹೆಚ್ಚಿನ ವಿವರಗಳಿಗೆ 'ಸನ್ಮತಿಶ್ರೀವಿಹಾರ' ನೋಡಬೇಕು)